## ಫ್ರಂಟ್ ಸ್ಲಿಟ್ ಕುರ್ತಾದ ಮೆರುಗು



ಫ್ರಂಟ್ ಸ್ಲಿಟ್ ಕುರ್ತಾ ಈಗ ಹೆಚ್ಚು ಪ್ರಚಲಿತದಲ್ಲಿರುವ ಫ್ಯಾಷನ್ ಟ್ರೆಂಡ್. ಇದು ಸಾಂಪ್ರದಾಯಿಕ ಸಮಾರಂಭದ ಜೊತೆಗೆ ಕಾಲೇಜು ಮತ್ತು ಕಚೇರಿ ಬಳಕೆಗೂ ಹೊಂದಿಕೆಯಾಗುತ್ತದೆ. ಕಾರ್ಯಕ್ರಮಗಳಲ್ಲಿ ಈ ಬಗೆಯ ಉಡುಗೆ ತೊಡುವುದಾದರೆ ಪಲಾಜೊ ಪ್ಯಾಂಟ್ ಜೊತೆಗೆ ಉಡುಪಿಗೆ ಹೊಂದುವಂತೆ ಆಭರಣ, ಕೇಶ ವಿನ್ಯಾಸ ಮಾಡಿಕೊಳ್ಳುವುದರಿಂದ ಅದ್ದೂರಿಯಾಗಿ ಕಾಣುತ್ತದೆ.

ಕಾಲೇಜು ಹುಡುಗಿಯರು ಜೀನ್ಸ್ ಪ್ಯಾಂಟ್, ಪುಶ್ ಅಪ್ ಲೆಗಿನ್ಸ್ ಜೊತೆಗೆ ಈ ಕುರ್ತಾ ಹಾಕಿಕೊಳ್ಳಬಹುದು. ಬೇಸಿಗೆ ಕಾಲಕ್ಕೆ ಎ– ಲೈನ್ಸ್ ಡ್ರೆಸ್ ಹೇಳಿಮಾಡಿಸಿದ್ದಂತಿರುತ್ತದೆ. ಫ್ರಾಕ್ ರೀತಿಯಲ್ಲಿ ಕಾಣುವ ಇದು ಪಾರ್ಟಿಗಳಿಗೆ ಹೊಂದಿಕೆಯಾಗುತ್ತದೆ. ನೋಡಲು ಆಕರ್ಷಕವಾಗಿ ಕಾಣುವ 'ಆಸ್ಟ್ರಿಜ್ ಫೆದರ್' ಡ್ರೆಸ್‌ಗಳು ಈಗ ಹೆಚ್ಚು ಬೇಡಿಕೆ ಪಡೆದುಕೊಂಡಿವೆ.

– ಬೃಂದಾ ಗೌಡ, ವಸ್ತ್ರವಿನ್ಯಾಸಕಿ

ಮಹಿಳಾ ವಿಶೇಷ



ಮಹಿಳೆಯನ್ನು ಭಾವನಾತ್ಮಕವಾಗಿ ಎಷ್ಟೊಂದು ಬೆಸೆದುಕೊಂಡಿದೆ ಎಂಬುದಕ್ಕೆ ಇದುವೇ ಸಾಕ್ಷಿ.

ಹಳೆಯ ಜೀನ್ಸ್ ಪ್ಯಾಂಟ್‌ಗಳೂ ವಸ್ತ್ರವಿನ್ಯಾಸಕರ ಕೈಚಳಕದಲ್ಲಿ ವಿಭಿನ್ನತೆಯನ್ನು ಪಡೆದುಕೊಳ್ಳುತ್ತವೆ. ಉಡುಗೆ ತೊಡುಗೆಗಳ ಆಯ್ಕೆಗೆ ದುಡ್ಡು ಮಾತ್ರ ಇದ್ದರೆ ಸಾಲದು. ಬುದ್ಧಿವಂತಿಕೆಯೂ ಇರಬೇಕು ಎಂಬುದು ಫ್ಯಾಷನ್ ಜಗತ್ತಿನ ಜಾಣ್ಣುಡಿ. ಬುದ್ಧಿವಂತಿಕೆ ಇದ್ದರೆ ಗುಂಪಿನಲ್ಲಿ ಎದ್ದು ಕಾಣುವಂತಹ ಉಡುಗೆ ತೊಡುಗೆ ಆಯ್ಕೆ ಮಾಡುವುದು ಸಾಧ್ಯವಾಗುತ್ತದೆ.

### ಎಲ್ಲಾ ಕಾಲಕ್ಕೂ ಸಲ್ಲುವ ಸೀರೆ

ಎಲ್ಲಾ ಕಾಲಕ್ಕೂ ಹೊಂದಿಕೊಳ್ಳುವ ಗುಣ ಸೀರೆಗಿದೆ. ಸೀರೆ ಎಂದಾಕ್ಷಣ ಮಹಿಳೆಯರಿಗೆ ವಿಶೇಷ ಪ್ರೀತಿ. ಹೆಣ್ಮಕ್ಕಳ ಮನದೊಳಗೆ ಸೀರೆಗಳ ಸಡಗರ ಸದಾ ರಿಂಗಣಿಸುತ್ತಲೇ ಇರುತ್ತದೆ. ಎಲ್ಲಾ ವಯೋಮಾನದ ಲಲನೆಯರನ್ನು ಇದು ಸೆಳೆಯಲು ಯಶಸ್ವಿಯಾಗಿದೆ. ಸೀರೆ ಈಗ ಸಾಂಪ್ರದಾಯಿಕ ಉಡುಪು ಎಂಬ ಪಟ್ಟಕ್ಕಷ್ಟೇ ಸೀಮಿತವಾಗಿರದೆ, ಆಶ್ಚರ್ಯವೆನಿಸುವಂತಹ ವಿನ್ಯಾಸಗಳು ಮಾರುಕಟ್ಟೆ ಪ್ರವೇಶಿಸಿವೆ. ಖಾದಿ ಸೀರೆಗೂ ಡಿಸೈನರ್ ಬ್ಲೌಸ್‌ಗಳನ್ನು ಪರಿಚಯಿಸಲಾಗಿದ್ದು, ಫ್ಯಾಷನ್ ಪ್ರಿಯರಿಗೆ ಹತ್ತಿರವಾಗಿದೆ.

### ಗರ್ಭಿಣಿಯರಿಗೂ ಉಂಟು ಸ್ಟೈಲಿಶ್ ಉಡುಪು

'ಮೆಟರ್ನಿಟಿ ಉಡುಪುಗಳು'ಗಳು ಟ್ರೆಂಡನ್ನೇ ಸೃಷ್ಟಿಸಿವೆ. ಗರ್ಭಿಣಿ ಎಂದಾಕ್ಷಣ ಸಡಿಲವಾದ, ಆಕಾರವಿಲ್ಲದ ಉಡುಪುಗಳೇ ನೆನಪಾಗುವ ಕಾಲವೊಂದಿತ್ತು. ಆದರೀಗ ಮಾರುಕಟ್ಟೆಗೆ ಅಡಿಯಿಟ್ಟಿರುವ ಮೆಟರ್ನಿಟಿ ಉಡುಪುಗಳನ್ನು ಕಂಡರೆ ಗರ್ಭಿಣಿಯರು ಹೀಗೂ ಫ್ಯಾಷನ್ ಮಾಡಬಹುದೇ ಎಂದು ಹುಬ್ಬೇರಿಸುವಂತೆ ಆಗುತ್ತದೆ. ಆರಾಮದಾಯಕವಾಗಿರುವ ಜೊತೆಗೆ ಕೈಕೆಟ್ಟುಕುವ ದರದಲ್ಲಿ ಆಕರ್ಷಕವಾದ ಉಡುಪುಗಳು ಈಗ ಲಭ್ಯವಿವೆ. ನಾಲ್ಕರಿಂದ ಆರು ತಿಂಗಳಿಗೆ ಹೊಟ್ಟೆ ಬೆಳೆಯಲು ಪ್ರಾರಂಭವಾಗುತ್ತದೆ. ಆಗ ಮ್ಯಾಕ್ಸಿ, ಫ್ಲೋರ್ ಲೆನ್ತ್ ಗೌನ್ ತೊಡಬಹುದು. ಇವುಗಳು ಹಗುರವಾಗಿರುವುದರಿಂದ ಆರಾಮ ಎನಿಸುತ್ತದೆ. ಉಸಿರಾಡುವುದು ಕಷ್ಟವಾಗುವುದಿಲ್ಲ. ಆರು ತಿಂಗಳ ನಂತರ ಟ್ಯೂನಿಕ್, ಕಫ್ತಾನ್, ಸ್ಟಗಿಟಿ ಟಾಪ್ ಹಾಕಿದರೆ ಒಪ್ಪುತ್ತದೆ. ಎಂಟು ತಿಂಗಳ ನಂತರ ಗರ್ಭಿಯರಿಗೆ ಹೆಚ್ಚು ಸೆಕೆಯಾಗುತ್ತದೆ. ಆಗ ಸ್ಕರ್ಟ್ ಹಾಕಿಕೊಳ್ಳುವುದು ಒಳ್ಳೆಯದು. ಗಾಢ ಬಣ್ಣಗಳ ಉಡುಪು ಧರಿಸುವಂತೆ ವಸ್ತ್ರ ವಿನ್ಯಾಸಕರು ಸಲಹೆ ನೀಡುತ್ತಾರೆ.

### ಹೂವಿನ ಚಿತ್ತಾರದ ಸೊಬಗು

ಎಂದೆಂದಿಗೂ ಟ್ರೆಂಡ್ ಆಗಿಯೇ ಉಳಿದುಬಿಡುವ ವಸ್ತ್ರವಿನ್ಯಾಸದ ಶೈಲಿಯಲ್ಲಿ ಫ್ಲೋರಲ್ ಪ್ರಿಂಟ್ ಕೂಡ ಒಂದು. ಪ್ರಕೃತಿಯ ಮಡಿಲಲ್ಲಿ ಅರಳುವ ಆಕರ್ಷಕ ಹೂವುಗಳು ಈ ಫ್ಲೋರಲ್ ಪ್ರಿಂಟ್ ಟ್ರೆಂಡ್ ರೂಪು ಪಡೆಯಲು ಕಾರಣವಾಗಿದೆ. ಯಾವುದೇ ಬಣ್ಣಗಳ ದಿರಿಸಿನಲ್ಲಿಯೂ ಅರಳುವ ಹೂವುಗಳ ವಿನ್ಯಾಸ ಫ್ಯಾಷನ್ ಪ್ರಿಯರಿಗೆ ಅಚ್ಚುಮೆಚ್ಚಾಗಿದೆ. ಸೀರೆ, ಕುರ್ತಾ, ಚೂಡಿದಾರಳಿಗಷ್ಟೇ ಸೀಮಿತವಾಗಿದ್ದ ಫ್ಲೋರಲ್ ಪ್ರಿಂಟ್ ವಿನ್ಯಾಸ, ಟೀಶರ್ಟ್, ಶಾರ್ಟ್ ಟಾಪ್, ಜಾಕೆಟ್‌ಗಳಲ್ಲೂ ನಳನಳಿಸುತ್ತಿವೆ.

### ಮಿನುಗುವ ದಿರಿಸು

ಪಾರ್ಟಿ ವಿಷಯಕ್ಕೆ ಬಂದರೆ ಶೈನಿಂಗ್ ದಿರಿಸು ಹಲವರ ಹಾಟ್ ಫೇವರೆಟ್. ಮಿನುಗುವ ಈ ಉಡುಪುಗಳು ಎಂಬತ್ತರ ದಶಕದಿಂದಲೂ ಟ್ರೆಂಡಿಂಗ್ ಆಗಿಯೇ ಉಳಿದಿವೆ. ಪಾಶ್ಚಾತ್ಯ ವಿನ್ಯಾಸದ ಉಡುಪಾಗಿದ್ದರೂ, ಇದು ನಮ್ಮ ದೇಶಕ್ಕೆ ಲಗ್ಗೆ ಇಡಲು ಹೆಚ್ಚು ಸಮಯ ಹಿಡಿಯಲಿಲ್ಲ. ದಶಕಗಳ ಇತಿಹಾಸ ಹೊಂದಿರುವ ಈ ವಿನ್ಯಾಸ ಹೊಸತನ ರೂಢಿಸಿಕೊಂಡು ಮತ್ತಷ್ಟು ಸುಂದರವಾಗಿ ಮಾರುಕಟ್ಟೆಗೆ ಲಗ್ಗೆ ಇಡುತ್ತಲೇ ಇದೆ. ಹುಟ್ಟುಹಬ್ಬದ ಸಮಾರಂಭ, ನೈಟ್ ಪಾರ್ಟಿಗಳಲ್ಲಿ ಈ ಬಗೆಯ ಉಡುಪು ಮಿಂಚು ಹರಿಸುತ್ತವೆ.